ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2014
2) ಸದಸ್ಯರ ಹೆಸರು : ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)
3) ಉತ್ತರಿಸುವ ದಿನಾಂಕ: : 24.03.2022
4) ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಕರ್ನಾಟಕ ಸರಕು ಮತ್ತು ಸೇವೆಗಳ ಕಾಯಿದೆ ಅನ್ವಯ ಗ್ರಾಹಕರ ಕಲ್ಯಾಣ ನಿಧಿಯನ್ನು ಸ್ಥಾಪಿಸಲಾಗಿದೆಯೇ: ಹಾಗಿದ್ದಲ್ಲಿ, ಇದರ ಧ್ಯೆಯೋದ್ದೇಶಗಳು ಏನು ಮತ್ತು ಈ ನಿಧಿಗೆ ಸಂಗ್ರಹವಾಗುವ ತೆರಿಗೆಗಳ ಮೂಲ ಯಾವುದು: (ಪೂರ್ಣ ಮಾಹಿತಿ ನೀಡುವುದು)	ಸರ್ಕಾರಿ ಆದೇಶ ಸಂಖ್ಯೆ: ಆಇ 12 ಸಿಎಸ್‌ಎಲ್ 2019 ದಿನಾಂಕ: 10.04.2019 ರನ್ವಯ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಕಾಯ್ದೆ, 2017 ರ ಪ್ರಕರಣ 57ರಲ್ಲಿ ಪ್ರಸ್ತಾಪಿಸಿರುವಂತೆ ಗ್ರಾಹಕರ ಕಲ್ಯಾಣ ನಿಧಿಯನ್ನು ಸ್ಥಾಪಿಸಲಾಗಿದೆ. ಸರಕು ಮತ್ತು ಸೇವೆಗಳ ಗ್ರಾಹಕರ ಕಲ್ಯಾಣ ಕಾರ್ಯಕ್ರಮಗಳನ್ನು ಉತ್ತೇಜಿಸಲು ಮತ್ತು ರಕ್ಷಿಸಲು ಹಣಕಾಸಿನ ನೆರವನ್ನು ಒದಗಿಸುವುದು ಮತ್ತು ಕ್ರಮಗಳನ್ನು ಜಾರಿಗೆ ತರುವುದನ್ನು ಒಳಗೊಂಡಿರುತ್ತದೆ. 1. ಕರ್ನಾಟಕ ಸರಕು ಮತ್ತು ಸೇವಾ ತೆರಿಗೆ ಕಾಯ್ದೆ, 2017ರ ಪ್ರಕರಣ 54(5)ರ ಪ್ರಕಾರ ಮರು ಪಾವತಿಗಾಗಿ ಕ್ಲೇಮ್ ಮಾಡಿರುವ ಮೊತ್ತದ ಪೂರ್ಣ ಅಥವಾ ಭಾಗವನ್ನು ಮರುಪಾವತಿ ಮಾಡಬಹುದೆಂದು ನಿರ್ಧಾರವಾದರೆ ಅಂತಹ ಪ್ರಕರಣಗಳಲ್ಲಿ ನಿರ್ಧರಿಸಿದ ಮೊತ್ತವನ್ನು ಸದರಿ ನಿಧಿಗೆ ಜಮೆ ಮಾಡತಕ್ಕದ್ದು. 2. ನಿಧಿಗೆ ಜಮೆಗೊಳಿಸಿದ ಮೊತ್ತದ ಹೂಡಿಕೆಯಿಂದ ಗಳಿಸಿದ ಯಾವುದೇ ಆದಾಯ ಮತ್ತು 3. ಇದರಿಂದ ಸ್ವೀಕರಿಸಿದ ಯಾವುದೇ ಇತರೆ ಹಣಗಳು.
ಆ)	ರಾಜ್ಯದಲ್ಲಿ ಈ ಗ್ರಾಹಕರ ಕಲ್ಯಾಣ ನಿಧಿಯನ್ನು ನಿರ್ವಹಣೆ ಮಾಡಲು ಇರುವ ವ್ಯವಸ್ಥೆ ಯಾವುದು; ಮತ್ತು ಈ ವ್ಯವಸ್ಥೆಯ ಕಾರ್ಯೋದ್ದೇಶಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು)	ಈ ನಿಧಿಯನ್ನು ನಿರ್ವಹಿಸಲು ಒಂದು ವ್ಯವಸ್ಥೆಯನ್ನು ರೂಪಿಸಲಾಗಿದೆ. ಅದರಂತೆ ಮಹಾಲೇಖಪಾಲರ ಕಛೇರಿಯಲ್ಲಿ ನಿರ್ವಹಿಸುವ ಸಾರ್ವಜನಿಕ ಖಾತೆ (public Accounts) 8229-00-200-0-065ಯಲ್ಲಿ ಸದರಿ ನಿಧಿಯಲ್ಲಿನ ಹಣವನ್ನು ಜಮೆ ಮಾಡಲಾಗುವುದು. ಈ ಹಣವನ್ನು ಸರ್ಕಾರದ ಅನುದಾನ ಅಂದಾಜುಗಳ ಮೂಲಕ ಸ್ವೀಕೃತಿ ಮತ್ತು ವೆಚ್ಚಗಳಿಗೆ ಬೇಕಾಗುವ ಅನುದಾನವನ್ನು ಒದಗಿಸಲಾಗುವುದು ಮತ್ತು ಮಹಾಲೇಖಪಾಲರು ಸೂಕ್ತ ಹೊಂದಾಣಿಕೆಯನ್ನು ಕೈಗೊಳ್ಳುವರು.

....2

ಇ)	ರಾಜ್ಯದಲ್ಲಿ ಗ್ರಾಹಕರ ಕಲ್ಯಾಣ ನಿಧಿಗೆ ಸಂಗ್ರಹವಾಗಿರುವ ಮೊತ್ತವೆಷ್ಟು ಮತ್ತು ಇದುವರೆಗೂ ಈ ನಿಧಿಯನ್ನು ಯಾವ ರೀತಿ ಸದ್ಬಳಕೆ ಮಾಡಿಕೊಳ್ಳಲಾಗಿದೆ; (ಪೂರ್ಣ ವಿವರ ನೀಡುವುದು)	ಸರಕು ಮತ್ತು ಸೇವಾ ತೆರಿಗೆ ಕಾಯ್ದೆಯನ್ವಯ ಸೃಜಿಸಲಾದ ಗ್ರಾಹಕರ ಕಲ್ಯಾಣ ನಿಧಿಯಲ್ಲಿ 2019-20 ರಿಂದ 2020-21ರ ಸಾಲಿನಲ್ಲಿ ಒಟ್ಟು ರೂ. 28,44,382ಗಳು ಸಂಗ್ರಹಿಸಲಾಗಿದೆ. ಈವರೆಗೆ ಯಾವುದೇ ಕ್ಲೇಮ್ ಬರದೇ ಇರುವುದರಿಂದ ಸದರಿ ನಿಧಿಯ ಬಳಕೆಯಾಗಿರುವುದಿಲ್ಲ.
ಈ)	ರಾಜ್ಯದಲ್ಲಿರು ಗ್ರಾಹಕರ ನಿಧಿ, ಕಲ್ಯಾಣ ನಿಧಿಯಲ್ಲಿ ಸಂಗ್ರಹಣೆ ಮೊತ್ತವು ಪ್ರತ್ಯೇಕವಾಗಿ ಇಡಲಾಗಿದೆಯೇ; (ಹಾಗಿದ್ದಲ್ಲಿ, ಪೂರ್ಣ ವಿವರ ನೀಡುವುದು)	ಲೆಕ್ಕಶೀರ್ಷಿಕೆ 0006-00-101-1-01 ಅಡಿಯಲ್ಲಿ ಜಮೆಯಾಗಿರುವ ಮೊತ್ತವನ್ನು ಲೆಕ್ಕ ಶೀರ್ಷಿಕೆ 2043-00-797-0-01-261 ಮುಖಾಂತರ 8229-00-200-0-65 ಸಾರ್ವಜನಿಕ ಖಾತೆಗೆ ಮಹಾಲೇಖಪಾಲರ ಮೂಲಕ ಹೊಂದಾಣಿಕೆ ಮಾಡಲಾಗುವುದು. ಮರುಪಾವತಿಗಾಗಿ ಅರ್ಜಿಗಳು ಬಂದಾಗ 2043-00-800-0-13-066 ಈ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ವೆಚ್ಚವನ್ನು ಭರಿಸಲಾಗುವುದು ಮತ್ತು ಸಾರ್ವಜನಿಕ ಖಾತೆಗೆ ವರ್ಗಾಯಿಸಲಾಗುವುದು. ಈ ವ್ಯವಸ್ಥೆಯ ಮೂಲಕ ಪ್ರತ್ಯೇಕವಾಗಿ ನಿಧಿಯನ್ನು ನಿರ್ವಹಿಸಲಾಗುತ್ತಿದೆ.

ಸಂಖ್ಯೆ: ಆಇ 15 ಸಿಎಸ್ಎಲ್ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ.